ನಮ್ಮೂರ ಬೆಲ್ಲಂಪುಲ್ಲಕ್ಕನ ಮಾತೆಂದರೆ ಸಂದರ್ಭಕ್ಕೆ ತಕ್ಕ ಹಾಗೆ ಕೆಲವೊಮ್ಮೆ ನೇರ, ಕೆಲವೊಮ್ಮೆ ವಕ್ರ. ಅತೀ ಕಡಿಮೆ ಪದಗಳಲ್ಲೇ ಬಹಳಷ್ಟನ್ನು ಹೇಳುವ ಚತುರೆ. ಮಾತಿಗೆ ತಕ್ಕ ವಾಯ್ಸ್ ಮಾಡ್ಯುಲೇಷನ್ನೂ, ಬಾಡಿ ಲಾಂಗ್ವೇಜೂ ಸೇರಿಕೊಂಡು ಅದಕ್ಕೊಂದು ಸೊಗಸು ಬರುತ್ತಿತ್ತು. ಶಾಲೆ ಕಲಿತವಳಲ್ಲ, ಯಾವ ಸಂವಹನ ಕಲೆ ವೃದ್ಧಿಸುವ ಕೋರ್ಸಿಗೆ ಹೋದವಳಲ್ಲ.

ಆಕೆಯ ನಿಜವಾದ ಹೆಸರು ರಂಗಮ್ಮ. ಆದರೆ ಬಹುತೇಕರಿಗೆ ಅದು ಗೊತ್ತಿರಲಿಲ್ಲ. ಬೆಲ್ಲಂಪುಲ್ಲಕ್ಕ ಎಂಬ ಅಡ್ಡ ಹೆಸರೇ ನಿಂತು ಬಿಟ್ಟಿತ್ತು. ಅದರ ಅರ್ಥವೂ ಯಾರಿಗೂ ಗೊತ್ತಿರಲಿಲ್ಲ, ಸ್ವತಃ ಆಕೆಗೂ. ಕೆಲವರು ಪುಲ್ಲಕ್ಕ ಅಂತ ತುಡಾಕಿ ಕರೆಯುತ್ತಿದ್ದರು.

ಆಕೆಯ ಸಮಯಪ್ರಜ್ಞೆಯ ಮಾತುಗಳು ಎಷ್ಟೋ ಜಟಿಲ ಸಮಸ್ಯೆಗಳಿಗೆ ಕುಂತಲ್ಲೇ ಪರಿಹಾರ ದೊರಕಿಸಿವೆ. ಒಮ್ಮೆ ನಮ್ಮೂರಲ್ಲಿ ಅದೇ ತಾನೆ ಒಂದು ಮದುವೆ ಮುಗಿದಿತ್ತು. ಅಕ್ಕಿ ತುಂಬಿದ ಸೇರನ್ನು ಕಾಲಲ್ಲಿ ಒದ್ದು ಅತ್ತೆ ಮನೆಗೆ ಬಂದಿದ್ದ ನವವಧು ಸುಶೀಲಮ್ಮ ದೇವರ ಮನೆಯಿಂದ ಕಳಸ ತರುವಾಗ ಸೀರೆ ತೊಡರಿ ಕಳಸ ಬಿದ್ದು, ಅರಿಸಿನ ಕುಂಕುಮವೆಲ್ಲಾ ಚೆಲ್ಲಾಪಿಲ್ಲಿ. ಅಮಂಗಳವಾಯಿತೆಂದು ಎಲ್ಲರೂ ಬೊಬ್ಬೆ ಹೊಡೆಯಹತ್ತಿದರು. ಅದರಲ್ಲೂ ಸುಶೀಲಮ್ಮನ ಅತ್ತೆ ಹೊಸಾ ಸೊಸೆಯನ್ನು ಕಣ್ಣಲ್ಲೇ ಸುಟ್ಟು ಬಿಡುವ ಲುಕ್ಕು ಕೊಡುತ್ತಿದ್ದರು. ಅಲ್ಲೇ ಇದ್ದ ಬೆಲ್ಲಂಪುಲ್ಲಕ್ಕ ಥಟಕ್ಕನೆ ಅತ್ತೆ ಕಡೆ ತಿರುಗಿ, "ಲಚ್ಚುಮ್ ದೇವಿ ಕಾಲ್ ಮುರ್ಕಂಡ್ ನಿಮ್ಮನೆಗೆ ಬಿದ್ದಿರ್ತಳೆ, ಒಳ್ಳೆ ಸಕುನ" ಎಂದಿತು. ಎಲ್ಲರ ಮಕವೂ ಫಳ್ ಎಂದು ಅರಳಿದವು. ಬೆದರಿ ಹೋಗಿದ್ದ ಸುಶೀಲಮ್ಮನಿಗಂತೂ ಜೀವ ಬಂದಂತಾಗಿತ್ತು. ಮಟ್ಟ ಮದ್ಲೇ ಕಂಡೆ ಕೆಟ್ಟ ಕನಸು ಎಂಬ ಗಾದೆಯಂತೆ ಮೊದಲ ದಿನವೇ ಅತ್ತೆ ಮನೆಯಲ್ಲಿ ಎದುರಾದ ಸಂಕಷ್ಟವನ್ನು ಚಿಟಿಕೆ ಹೊಡೆಯೋದರಲ್ಲಿ ಪಾರು ಮಾಡಿದ ಬೆಲ್ಲಂಪುಲ್ಲಕ್ಕನ ಬಗ್ಗೆ ಆಕೆಗೆ ಎಲ್ಲಿಲ್ಲದ ಅಭಿಮಾನ ಬಂದು ಫ್ಯಾನಾಗಿಬಿಟ್ಟಿತು. ಇಂಥಾ ಫ್ಯಾನುಗಳು ಬೆಲ್ಲಂಪುಲ್ಲಕ್ಕನಿಗೆ ಊರ ತುಂಬಾ ಇದ್ದವು.

ಇಂಥಾದ್ದೇ ಮತ್ತೊಂದು ಉದಾಹರಣೆ ನೋಡಿ:

ಮದುವೆಯಾಗಿ ಕೆಲವೇ ದಿನವಾಗಿದ್ದ ಹೆಣ್ಣುಮಗಳೊಬ್ಬಳ ಒಂದು ಕೈಯಲ್ಲಿ ಬಳೆ ಕಡಿಮೆಯಾಗಿದ್ದವು. ಅದನ್ನು ಕಂಡ ಆಕೆಯ ನೆಂಟರ ಮುದುಕಿಯೊಂದು, "ಶಾಸ್ತ್ರದ ಬಳೆ ವಡಾಕ್ಕಂಡಿದ್ದಿಯಲ್ಲ, ಕೇಡುಗಾಲ ವಕ್ಕರಿಸ್ತೈತೆ" ಎಂದು ಜೋರು ಮಾಡತೊಡಗಿತು. ತಕ್ಷಣ ಬೆಲ್ಲಂಪುಲ್ಲಕ್ಕ, "ವಸ್ದಾಗಿ ಮದುವೆ ಆಗಿರೋ ಹುಡುಗೀ ಕೈಯಾಗಳ ಬಳೆ ವಡೀದೆ, ನನ್ ಕೈಯಾಗೂ ನಿನ್ ಕೈಯಾಗೂ ವಡೀತವಾ, ಸುಮ್ಮಂಕೂಕಳಜ್ಜಿ, ಏನೂಂತ ಮಾತಾಡ್ತೀಯಾ" ಎಂದು ಮುದುಕಿಗೆ ದಬಾಯಿಸಿ, ಇಡೀ ವಾತಾವರಣಕ್ಕೆ ಬಿಸಿಯೇರಿಸಿ ಪ್ರಕರಣವನ್ನು ತಿಳಿಯಾಗಿಸಿಬಿಟ್ಟಳು. ಮುದುಕಿ ಹೊರಿಸಿದ್ದ ಕಳಂಕಕ್ಕೆ ಹೆದರಿ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದ ಹುಡುಗಿ ಪುಲ್ಲಕ್ಕನ ಮಾತಿಗೆ ಏಕ್‌ದಂ ಕೆಂಪಾಗಿಬಿಟ್ಟಿತು. ಕಣ್ಣಲ್ಲಿ ನೀರು ಬರುವಂತೆ ಬಿದ್ದೂ ಬಿದ್ದೂ ನಗುವ ಸರದಿ ಅಲ್ಲಿದ್ದವರದಾಗಿತ್ತು. ಅಂಥಾ ಚಾಲೂಕು, ಅಂಥಾ ಟೈಮಿಂಗು ಆಕೆಯದು.

ಮದುವೆ ವಿಷಯ ಬಂದಾಗ ಬೆಲ್ಲಂಪುಲ್ಲಕ್ಕನ ಇನ್ನಷ್ಟು ನಗೆಸಾರಗಳು ನೆನಪಾಗುತ್ತವೆ. ಯಾವುದೇ ಮದುವೆ ಅಥವಾ ಹೆಣ್ಣು ಗಂಡು ಕೂರಿಸಿದ ಸಮಾರಂಭಕ್ಕೆ ಹೋದರೂ ಆಕೆ ಮಾಡುತ್ತಿದ್ದ ಮೊದಲ ಕೆಲಸವೆಂದರೆ ಅವರಿಬ್ಬರ ಎತ್ತರವನ್ನು ಕಣ್ಣಲ್ಲೇ ಅಳೆಯುವುದು.